# ಪ್ರಕಟಣೆಯ ಅವಸರ

ಅನೇಕ ಲೇಖಕರು ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಬರಹಗಳನ್ನು ಪ್ರಕಟಿಸುತ್ತಿರುತ್ತಾರೆ. ಆಗಷ್ಟೆ ಬರೆದ ಕವಿತೆ, ಲೇಖನಗಳು ಫೇಸ್‌ಬುಕ್‌ನ ಗೋಡೆಯ ಮೇಲೆ ಹೊಳೆಯುತ್ತಿರುತ್ತವೆ. ಅವಕ್ಕೆ ಸಾಕಷ್ಟು ಮೆಚ್ಚುಗೆಯೂ ಕ್ಷಣಮಾತ್ರದಲ್ಲೇ ಅವರ ಹಿಂಬಾಲಕರು, ಗೆಳೆಯ, ಗೆಳತಿಯರಿಂದ ಸಂದಿರುತ್ತದೆ. ಅಲ್ಲಿಗೆ ಅದನ್ನು ಬರೆದ ಲೇಖಕ ಸಾರ್ಥಕತೆ, ಪುಳಕ, ರೋಮಾಂಚನ, ಹೆಮ್ಮೆ ಇತ್ಯಾದಿ ಭಾವನೆಗಳನ್ನು ಅನುಭವಿಸುತ್ತಾನೆ. ಬರೆದ ತಕ್ಷಣವೇ ತಮ್ಮ ಬರಹವನ್ನು ಹಂಚಿಕೊಳ್ಳುವ ಈ ಲೇಖಕರು ಕೊಂಚ ಕಾಲ ಅದನ್ನು ಮುಚ್ಚಿಟ್ಟು, ತಿದ್ದಿತೀಡಿದ ಬಳಿಕ ಪ್ರಕಟಿಸಬೇಕು ಎಂದು ನುರಿತ ಕುಶಲಕರ್ಮಿಯ ತರಹ ಯಾಕೆ ಯೋಚಿಸುವುದಿಲ್ಲ? ಈ ಬಗೆಯ ಪ್ರಕಟಣೆ ಸುಲಭ ಮತ್ತು ಸರಳ ಎಂಬ ಕಾರಣದಿಂದಲೇ ಹಾಗೆ ಮಾಡುತ್ತಾರೆಯೇ? ಅಥವಾ ಫೇಸ್‌ಬುಕ್‌ನಂತಹ ಜಾಲತಾಣಗಳು ಒಡ್ಡುವ ಕ್ಷಣಿಕ ತೃಪ್ತಿಯ ಆಮಿಷ, ಬಿಡಲಾಗದ ಗೀಳಿನಿಂದ ಆಗುತ್ತದೆಯೇ? ಇವೆಲ್ಲವೂ ಅವುಗಳ ಹಿಂದೆ ಇರುವುದು ಸಾಧ್ಯ. ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗುವ ಎಲ್ಲವೂ ಕಡಿಮೆ ಗುಣಮಟ್ಟದವು ಎನ್ನುವ ಹಾಗಿಲ್ಲ. ಅಲ್ಲೂ ಉತ್ತಮ ಬರಹಗಳು ಕಾಣಸಿಗುತ್ತವೆ. ಆದರೆ ಕೆಟ್ಟಬರಹಗಳ ರಾಶಿಯಲ್ಲಿ ಅವು ಕಣ್ಮರೆಯಾಗಿರುತ್ತವೆ. ಅವನ್ನು ನೆನಪಿನಲ್ಲಿಟ್ಟುಕೊಂಡು ಹುಡುಕಿ ಓದಿ ಪ್ರತಿಕ್ರಿಯಿಸುವಷ್ಟು ಸಮಯ, ತಾಳ್ಮೆ ಯಾರಿಗೂ ಇರುವುದಿಲ್ಲ. ಇನ್ನೊಂದು ಸಂಗತಿ ಎಂದರೆ ಇಲ್ಲಿ ಪ್ರಕಟವಾಗುವ ಬರಹಗಳಿಗೆ ಬರುವ ಪ್ರತಿಕ್ರಿಯೆಗಳು ಅನೇಕಬಾರಿ ಅವಿಮರ್ಶಾತ್ಮಕವಾಗಿರುತ್ತವೆ. ಅವುಗಳಿಂದ ಲೇಖಕ ಬೆಳೆಯುವುದಾದರೂ ಹೇಗೆ?




ಪ್ರಕಟಣೆಯ ಅವಸರವು ಒಳ್ಳೆಯ ಕೃತಿಯನ್ನು ಸೃಷ್ಟಿಸುವುದಿಲ್ಲ; ಅದು ಆ ಹೊತ್ತಿಗೆ ಬರಹವನ್ನು ಹಂಚಿಕೊಂಡ ಸಮಾಧಾನವನ್ನು ಕೊಡಬಹುದಷ್ಟೆ. ಆನ್‌ಲೈನ್‌ನಲ್ಲೇ ಓದುವ ಗಂಭೀರ ಓದುಗರು ಸೀಮಿತ ಸಂಖ್ಯೆಯಲ್ಲಿದ್ದಾರೆ. ಹಾಗಾಗಿ ಉತ್ತಮ ಬರಹವೂ ಅನೇಕರ ಗಮನ ಸೆಳೆಯದೇ ಹೋಗಬಹುದು. ಜೊತೆಗೆ ಓದಿನ ಖುಷಿಯನ್ನು ಅವು ಕೊಡಲಾರವು. ಮಿಂಚಿ ಮರೆಯಾಗುವ ಮಾಯಾಜಿಂಕೆ ಎಷ್ಟೇ ಸುಂದರವಾಗಿದ್ದರೂ ಕೈಗೆ ನಿಲುಕುವುದಿಲ್ಲವಲ್ಲ? ಈ ಕಾರಣದಿಂದಲೇ ಅವು ಓದುಗರನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ಇದು ಫೇಸ್‌ಬುಕ್‌ನಂತಹ ಜಾಲತಾಣಗಳಿಗೆ ಮಾತ್ರ ಸೀಮಿತವಲ್ಲ. ಅದು ಸಮಾಜದ ಪ್ರತಿಬಿಂಬ ಮಾತ್ರವಷ್ಟೆ. ತಕ್ಷಣಕ್ಕೆ ಮಿಂಚಬೇಕು ಎಂಬ ಅವಸರವು ಹಲವು ರಂಗಗಳಲ್ಲಿ ಕಾಣಿಸುವ ಸಾಮಾನ್ಯ ಅಂಶವಾಗಿದೆ.

ಬರವಣಿಗೆಯ ಉದ್ಯೋಗದಲ್ಲಿ ಗಂಭೀರವಾಗಿ ತೊಡಗಿಸಿಕೊಂಡವರ ಲವಲವಿಕೆಯ ಬರಹಗಳನ್ನು ಈ ಸಂಚಿಕೆ ಒಳಗೊಂಡಿದೆ. ಹಾಗೆ ತೊಡಗಿಸಿಕೊಂಡವರ ಶ್ರದ್ಧೆಯನ್ನು, ಕಸುಬುದಾರಿಕೆಯನ್ನು ಇಲ್ಲಿನ ಬರಹಗಳೇ ತೋರುತ್ತವೆ. ಕವಿ, ನಾಟಕಕಾರ, ಕಾದಂಬರಿಕಾರ ಚಂದ್ರಕಾಂತ ಕುಸನೂರರ ಸಂದರ್ಶನ ಈ ಬಾರಿಯ ವಿಶೇಷವಾಗಿದೆ.

**ಸಂದೀಪ ನಾಯಕ**